ಅತ್ಯಂತ ಆಧುನಿಕ ಮೂಲಸೌಕರ್ಯದೊಂದಿಗೆ 20 ಎಕರೆ ವಿಸ್ತಾರವಾದ ಪರಿಸರ ಸ್ನೇಹಿ ಕ್ಯಾಂಪಸ್‌ನಲ್ಲಿರುವ ಜ್ಞಾನದೀಪ ವಿದ್ಯಾಸಂಸ್ಥೆ ಶಿವಮೊಗ್ಗ-ಹೊಳೆಹೊನ್ನೂರು ಎನ್.ಎಚ್-13 ರಸ್ತೆಯ ಜಾವಳ್ಳಿಯಲ್ಲಿದೆ. ಪ್ರೀಸ್ಕೂಲ್‌ನಿಂದ 12ನೇ ತರಗತಿಯವರೆಗೆ ಸಿಬಿಎಸ್‌ಇ ತರಗತಿಗಳನ್ನು ನಡೆಸುತ್ತಿರುವ ಶಿವಮೊಗ್ಗ ಜಿಲ್ಲೆಯ ಏಕೈಕ ಶಾಲೆ ಎಂಬ ಹೆಗ್ಗಳಿಕೆ ಜ್ಞಾನದೀಪ ಸಂಸ್ಥೆಯದ್ದು. ಸಕಲ ಸೌಲಭ್ಯದೊಂದಿಗೆ ಸಂಸ್ಥೆ ಮಲೆನಾಡಿನಲ್ಲಿ ಮನೆಮಾತಾಗಿದೆ.

ಪಿಯು ಕಾಲೇಜು ಹುಡುಗಿಯರಿಗೆ ಸುಸಜ್ಜಿತ ಹಾಸ್ಟೆಲ್ ಸೌಲಭ್ಯ

Sri Aurobindo Foundation for Education (SAFE)

ಜ್ಞಾನದೀಪ ವಿದ್ಯಾಸಂಸ್ಥೆ, ಜಾವಳ್ಳಿ, ಶಿವಮೊಗ್ಗ

" स विद्या या विमुक्तये "
JNANADEEPA SCHOOL . JAVALLI
SAFE

ಜ್ಞಾನದೀಪ

ಸೀನಿಯರ್ ಸೆಕೆಂಡರಿ ಶಾಲೆಗೆ

ಬೆಳ್ಳಿ ಹಬ್ಬದ ಸಂಭ್ರಮ

ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾರಂಭವಾದ ಪ್ರಥಮ ಖಾಸಗಿ ಸಿಬಿಎಸ್‌ಇ ಶಾಲೆ ಎಂಬ ಹೆಗ್ಗಳಿಕೆಯ ಜ್ಞಾನದೀಪ ಸೀನಿಯರ್ ಸೆಕೆಂಡರಿ ಶಾಲೆ ಇಂದು ಬೆಳ್ಳಿಹಬ್ಬದ ಸಂಭ್ರಮದಲ್ಲಿದೆ.

ಮಲೆನಾಡು ಭಾಗದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ 1999ರಲ್ಲಿ 34 ವಿದ್ಯಾರ್ಥಿಗಳಿಂದ ಆರಂಭವಾದ ಶಾಲೆ ಇಂದು 2500 ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದೆ. 20 ಎಕರೆ ಜಾಗದಲ್ಲಿ ಸುಸಜ್ಜಿತ ಕಟ್ಟಡ, ನಾಲ್ಕು ಎಕರೆ ಆಟದ ಮೈದಾನ, 200 ಮೀಟರ್ ಅಥ್ಲೆಟಿಕ್ ಟ್ರ್ಯಾಕ್ ಹೊಂದಿದೆ. ಏಕಕಾಲದಲ್ಲಿ ಹತ್ತಕ್ಕಿಂತ ಹೆಚ್ಚು ಆಟಗಳನ್ನು ಆಡಲು ಸೌಲಭ್ಯವಿರುವ ಕ್ರೀಡಾಂಗಣ ವ್ಯವಸ್ಥೆ ಕಲ್ಪಿಸಲಾಗಿದೆ. 45 ಶಾಲಾ ಬಸ್‌ಗಳನ್ನು ಹೊಂದಿದ್ದು, ಶಾಲೆಯಿಂದ 40 ಕಿ.ಮೀ. ವ್ಯಾಪ್ತಿಯಲ್ಲಿರುವ ಶಿವಮೊಗ್ಗ, ಭದ್ರಾವತಿ, ಚನ್ನಗಿರಿ, ಹೊನ್ನಾಳಿ, ಆನವೇರಿಯಿಂದ ಮಕ್ಕಳನ್ನು ಶಾಲೆಗೆ ಕರೆತರುವ ವ್ಯವಸ್ಥೆ ಇದೆ.

ಪ್ರತಿ ವರ್ಷ ಅತ್ಯುತ್ತಮ ಶೈಕ್ಷಣಿಕ ಫಲಿತಾಂಶ ಪಡೆಯುತ್ತಿದ್ದು, ಶಾಲೆಯ ಸಿಮ್ರನ್ ಎಂ.ಕೋಟ್ಯಾನ್ 10ನೇ ತರಗತಿಯಲ್ಲಿ ರಾಷ್ಟ್ರಮಟ್ಟದಲ್ಲಿ ತೃತೀಯ ಸ್ಥಾನ ಹಾಗೂ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ವಿನಲ್, ಜಿ.ಎಸ್. ಆತ್ರೇಯ ಎಂ.ಪವಾರ್, ಮೃದುನಿ, ಶ್ರೇಯಾ ಕಿಶೋರ್ ರಾಷ್ಟ್ರಮಟ್ಟದಲ್ಲಿ ಟಾಪ್ ಟೆನ್ ಸ್ಥಾನವನ್ನು ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

750 ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಪಡೆಯುವ ಮೂಲಕ ನಾಡಿಗೆ, ದೇಶಕ್ಕೆ ಕೀರ್ತಿ ತಂದಿದ್ದಾರೆ. ಪ್ರತೀ ಏಳು ವಿದ್ಯಾರ್ಥಿಗಳಲ್ಲಿ ಒಬ್ಬರು ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿರುವುದು ಹೆಮ್ಮೆಯ ಸಂಗತಿ.

ರಾಷ್ಟ್ರಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಹಲವು ಬಾರಿ ಭಾಗವಹಿಸಿ ಬಹುಮಾನ ಗಳಿಸಿದ ಹೆಗ್ಗಳಿಕೆ ಜ್ಞಾನದೀಪ ಶಾಲೆಯದ್ದಾಗಿದೆ. ಹಲವು ವಿದ್ಯಾರ್ಥಿಗಳು ರಾಜ್ಯಮಟ್ಟದ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿ ಯುವ ವಿಜ್ಞಾನಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಭಾರತರತ್ನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರನ್ನು ಶಾಲೆಯ ದಶಮಾನೋತ್ಸವ ಸಮಾರಂಭಕ್ಕೆ ಕರೆಸಿ 25 ಸಾವಿರ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡುವ ಅವಕಾಶವನ್ನು ಕಲ್ಪಿಸಲಾಗಿತ್ತು. ಅಬ್ದುಲ್‌ಕಲಾಂ ಅವರ ಅಪೇಕ್ಷೆಯಂತೆ ಸುಸಜ್ಜಿತವಾದ ಸೈನ್ಸ್ ಪಾರ್ಕ್ ಸ್ಥಾಪಿಸಲಾಗಿದ್ದು, ವಿಜ್ಞಾನಕ್ಕೆ ಸಂಬಂಧಿಸಿದ 85 ಮಾದರಿಗಳನ್ನು ನಿರ್ಮಿಸಲಾಗಿದೆ.

ನೂರಾರು ಔಷಧೀಯ ಗಿಡಮೂಲಿಕೆ ಸಸ್ಯಗಳನ್ನು ಹೊಂದಿರುವ ಬಿಜಿಎಲ್ ಸ್ವಾಮಿ ಮೆಮೋರಿಯಲ್ ಔಷಧಗಳ ಉದ್ಯಾನವನ ಅಧ್ಯಯನಕ್ಕೆ ಯೋಗ್ಯವಾಗಿದೆ. ನೋಬೆಲ್ ಪ್ರಶಸ್ತಿ ಪುರಸ್ಕೃತ ಸರ್ ಸಿ.ವಿ. ರಾಮನ್ ಅವರು ಬಳಸುತ್ತಿದ್ದ ಆಕಾಶ ವೀಕ್ಷಣಾಲಯದ ಡೋಮ್‌ನ್ನು ಜ್ಞಾನದೀಪ ಶಾಲೆ ಹೊಂದಿದೆ. ಇಲ್ಲಿ ಅತ್ಯಾಧುನಿಕವಾದ ಆಕಾಶ ವೀಕ್ಷಣಾ ದೂರದರ್ಶಕವನ್ನು ಅಳವಡಿಸಿ, ಆಕಾಶಕಾಯಗಳ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ.

ರಾಷ್ಟ್ರೀಯ ಯೋಜನೆಯಲ್ಲಿ ಒಂದಾದ ಅಟಲ್ ಟಿಂಕರಿಂಗ್ ಲ್ಯಾಬ್ ಪ್ರಾರಂಭಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸುವುದರೊಂದಿಗೆ ಹಲವು ರೀತಿಯ ಸಂಶೋಧನೆಗಳನ್ನು ಮಾಡಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ. ರಾಷ್ಟ್ರಮಟ್ಟದ ಎ.ಟಿ.ಎಲ್. ಮ್ಯಾರಥಾನ್‌ನಲ್ಲಿ ಭಾಗವಹಿಸಿದ ಹತ್ತು ಸಾವಿರ ಶಾಲೆಗಳಲ್ಲಿ ಜ್ಞಾನದೀಪ ಶಾಲೆ 75ನೇ ಸ್ಥಾನ ಪಡೆದಿದೆ. ಶಿವಮೊಗ್ಗ ಜಿಲ್ಲೆಯಿಂದ ಆಯ್ಕೆಯಾದ ಮೊದಲ ಮತ್ತು ಏಕೈಕ ಹೈಬ್ರಿಡ್ ಸ್ಕೂಲ್ ಎಂಬ ಹೆಗ್ಗಳಿಕೆ ಹೊಂದಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಲು ಅವಕಾಶ ಮಾಡಲಾಗಿದೆ.

ಡಾ. ಎ.ಪಿ.ಜೆ.ಅಬ್ದುಲ್‌ಕಲಾಂ ಅವರು ಜ್ಞಾನದೀಪ ಶಾಲೆಗೆ ಭೇಟಿ ನೀಡಿದ ಸವಿನೆನಪಿಗಾಗಿ ಕಲಾಂ ಭವನವನ್ನು ಸ್ಥಾಪಿಸಲಾಗಿದೆ. ಇಲ್ಲಿ ಅಬ್ದುಲ್ ಕಲಾಂ ಹಾಗೂ ಡಾ.ಬಿ.ಎನ್. ಸುರೇಶ್ ಅವರ ಸಾಧನೆಯ ಕೆಲವು ವಿಜ್ಞಾನ ಮಾದರಿ ಹಾಗೂ ಮಾಹಿತಿಯನ್ನು ಪ್ರದರ್ಶಿಸಲಾಗಿದೆ.

ಪ್ರತಿವರ್ಷವು ಜ್ಞಾನದೀಪ ಹಬ್ಬವನ್ನು ಆಚರಿಸಲಾಗುತ್ತಿದೆ. ಒಂದು ವಾರದ ಕಾಲ ನಡೆಯುವ ಈ ಹಬ್ಬದಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಸ್ತು ಪ್ರದರ್ಶನ, ಕರಕುಶಲ ವಸ್ತುಗಳ ಪ್ರದರ್ಶನ, ಎರಡು ದಿನಗಳ ಕಾಲ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಲಿದೆ. ಕ್ರೀಡೆ, ಶಿಕ್ಷಣ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಾಗುತ್ತದೆ.

ಜ್ಞಾನದೀಪ ಶಾಲೆಯ 2500 ವಿದ್ಯಾರ್ಥಿಗಳು ಎರಡು ದಿನ ನಡೆಯುವ ವಾರ್ಷಿಕ ಕ್ರೀಡಾಕೂಟದಲ್ಲಿ ಭಾಗವಹಿಸಿ ತಮ್ಮ ಕ್ರೀಡಾ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ನಾಲ್ಕು ಹೌಸ್‌ಗಳಾಗಿ ಇಡೀ ಶಾಲೆಯ ವಿದ್ಯಾರ್ಥಿಗಳನ್ನು ವಿಭಾಗ ಮಾಡಿ ಹೌಸ್‌ಗಳ ಮಧ್ಯೆ ಸ್ಪರ್ಧೆಯನ್ನು ನಡೆಸಲಾಗುತ್ತದೆ. ಇಡೀ ವರ್ಷ ನಿರಂತರವಾಗಿ ವಿದ್ಯಾರ್ಥಿಗಳಿಗೆ ಸಹ ಪಠ್ಯ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಇದರಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಪಠ್ಯದಲ್ಲಿರುವ ಹಲವು ಕಥೆ, ಘಟನೆಗಳನ್ನು ವಿದ್ಯಾರ್ಥಿಗಳ ಮೂಲಕ ಅಭಿನಯ ಮಾಡಿಸಿ ಸರಳವಾಗಿ ವಿಷಯವನ್ನು ಅರ್ಥ ಮಾಡಿಸಲು ತರಬೇತಿ ನೀಡಲಾಗುತ್ತದೆ.

ಮಕ್ಕಳಿಗೆ ನಾಟಕ, ಭರತನಾಟ್ಯ, ಯಕ್ಷಗಾನ, ಕರಾಟೆ, ಸಂಗೀತ, ಚಿತ್ರಕಲೆ, ವಾದ್ಯ ಸಂಗೀತ, ಬ್ಯಾಂಡ್ ಸೆಟ್‌ಗಳ ತರಬೇತಿಯನ್ನು ನುರಿತ ಅನುಭವದ ಶಿಕ್ಷಕರಿಂದ ಕೊಡಿಸುವ ಮೂಲಕ ಅವರಿಗೆ ಕಲೆಯ ಬಗ್ಗೆ ಆಸಕ್ತಿಯನ್ನು ಹೆಚ್ಚಿಸಲಾಗುತ್ತಿದೆ.

ಪ್ರೀಸ್ಕೂಲ್‌ನಿಂದ ಹನ್ನೆರಡನೇ ತರಗತಿಯವರೆಗೆ ಸಿಬಿಎಸ್‌ಇ ತರಗತಿಗಳನ್ನು ನಡೆಸುತ್ತಿರುವ ಶಿವಮೊಗ್ಗ ಜಿಲ್ಲೆಯ ಏಕೈಕ ಶಾಲೆ ಎಂಬ ಹೆಗ್ಗಳಿಕೆ ಜ್ಞಾನದೀಪ ಶಾಲೆಯದ್ದು. ಅನುಭವ ಹೊಂದಿದ ಶಿಕ್ಷಕ ವೃಂದವನ್ನು ಹೊಂದಿರುವ ಜ್ಞಾನದೀಪ ಶಾಲೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದೆ.

ಎಂಟನೆಯ ತರಗತಿಯಿಂದಲೇ ಜ್ಞಾನದೀಪ ಅಕಾಡೆಮಿಯ ಮೂಲಕ ಫೌಂಡೇಷನ್ ಕೋರ್ಸ್ ನೀಟ್ ಮತ್ತು ಜೆಇಇ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗೆ ಅನುಕೂಲವಾಗುವಂತೆ ತರಬೇತಿಯನ್ನು ನೀಡುತ್ತಿದೆ. ಸಾಹಿತ್ಯ, ವಿಜ್ಞಾನ, ಆರೋಗ್ಯ, ಪರಿಸರ, ಹೆರಿಟೇಜ್, ಗಣಿತ ಕ್ಲಬ್‌ಗಳ ಮೂಲಕ ವೈವಿಧ್ಯಮಯ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿದೆ. ಒಂದನೇ ತರಗತಿಯಿಂದ ಹನ್ನೆರಡನೇ ತರಗತಿಯವರೆಗೆ ವಯೋಮಾನಕ್ಕೆ ಅನುಗುಣವಾಗಿ ಹಲವು ಸ್ಥಳಗಳ ಭೇಟಿ ಹಾಗೂ ಶೈಕ್ಷಣಿಕ ಪ್ರವಾಸವನ್ನು ಪ್ರತಿ ವರ್ಷವೂ ಹಮ್ಮಿಕೊಳ್ಳಲಾಗುತ್ತದೆ.

ಜಾವಳ್ಳಿಯ ಜ್ಞಾನದೀಪ ಸೀನಿಯರ್ ಸೆಕೆಂಡರಿ ಸ್ಕೂಲ್ ಪ್ರೈಮರಿ ವಿಭಾಗದ ಕಟ್ಟಡ.

ವಿದ್ಯಾಸಂಸ್ಥೆಯಲ್ಲಿರುವ ಸೌಲಭ್ಯಗಳು

- ಸಾಕಷ್ಟು ಶೌಚಾಲಯಗಳು
- 24X7 ಗಂಟೆ ಭದ್ರತೆ
- ಪರಿಶುದ್ಧ ಕುಡಿಯುವ ನೀರು
- ಸೋಲಾರ್ ಬಿಸಿ ನೀರಿನ ಸೌಲಭ್ಯ
- ಪರಿಸರ ಸ್ನೇಹಿ ಹಸಿರು ಕ್ಯಾಂಪಸ್
- ದಿನವಿಡಿ ಗ್ರಂಥಾಲಯ ಸೌಲಭ್ಯ
- ವಿದ್ಯಾರ್ಥಿ ಕೇಂದ್ರಿತ ಕಲಿಕೆ
- ಸುಸಜ್ಜಿತ ಪ್ರಯೋಗಾಲಯ
- ಆಹಾರ ಗುಣಮಟ್ಟ ಮೆನು ಮತ್ತು ಮೌಲ್ಯ ಮಾಪನ ಮಾಡಲು ಆಹಾರ ಸಮಿತಿ ಸಭೆಗಳು.
- ಬಾಲಕಿಯರ ಹಾಸ್ಟೆಲ್‌ಗೆ ಮಹಿಳಾ ಭದ್ರತಾ ಸಿಬ್ಬಂದಿ
- ಪ್ರತ್ಯೇಕ ಮಹಡಿಗಳಿಗೆ ಪ್ರತ್ಯೇಕ ವಾರ್ಡನ್‌ಗಳು
- ಶೈಕ್ಷಣಿಕ ಮತ್ತು ಆರೋಗ್ಯ ಅಗತ್ಯಗಳ ಪರಿಶೀಲನೆಗೆ ಹಾಸ್ಟೆಲ್ ಬೋಧಕರು, ಸಲಹೆಗಾರರು ಮತ್ತು ಮಾರ್ಗದರ್ಶಕರು

- ಆಂಬ್ಯುಲೆನ್ಸ್ ಮತ್ತು ಸಮಾಲೋಚನೆ ಸೌಲಭ್ಯ
- ನಿಯಮಿತ ಮತ್ತು ಮೇಲ್ವಿಚಾರಣೆಯ ಅಧ್ಯಯನ ಸಮಯ
- ಯೋಗ ತರಗತಿಗಳು
- ಕುಟುಂಬ ಸದಸ್ಯರೊಂದಿಗೆ ಹೊರಹೋಗುವ ಸೌಲಭ್ಯದ ವ್ಯವಸ್ಥೆ
- ಪತ್ರಿಕೆ ಸೌಲಭ್ಯದೊಂದಿಗೆ ಓದುವ ಕೊಠಡಿಗಳು
- ವಿದ್ಯಾರ್ಥಿಗಳಿಗೆ ಕೌಶಲ ಅಭಿವೃದ್ಧಿ ಮತ್ತು ಸಂಸ್ಕೃತಿ ಅರಿವು
- ಸಿಸಿಎ ಕಾರ್ಯಕ್ರಮಗಳ ವ್ಯವಸ್ಥೆ

- ತಡೆರಹಿತ ವಿದ್ಯುತ್ ಸರಬರಾಜಿಗಾಗಿ ಜನರೇಟರ್‌ಗಳು
- 20 ವರ್ಷಗಳ ಬೋಧನಾ ಅನುಭವ ಹೊಂದಿರುವ ಅನುಭವಿ ಅಧ್ಯಾಪಕರು.
- ಬೋರ್ಡ್ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮಗ್ರ ತರಬೇತಿ
- ವಿಜ್ಞಾನದಲ್ಲಿ ಸಿಇಟಿ / ನೀಟ್ / ಜೆಇಇ / ಕೆವಿಪಿವೈ / ಎಆರ್ಓ / ಎನ್‌ಡಿಎ, ಇತ್ಯಾದಿ.
- ವಾಣಿಜ್ಯದಲ್ಲಿ ಸಿಎ / ಸಿಎಸ್‌ಗಾಗಿ ಫೌಂಡೇಶನ್ ಕೋರ್ಸ್‌ಗಳು.
- ಪ್ರಶಾಂತ ಕಲಿಕೆಯ ವಾತಾವರಣದೊಂದಿಗೆ ಆಧುನಿಕ ಮೂಲಸೌಕರ್ಯ.

- ನಿಯತಕಾಲಿಕ ಪರೀಕ್ಷೆಗಳು ಮತ್ತು ಮಾದರಿ ಪತ್ರಿಕೆಗಳೊಂದಿಗೆ ಸಮಗ್ರ ಅಧ್ಯಯನ ಸಾಮಗ್ರಿಗಳು.
- ವೈಯಕ್ತಿಕ ಮಾರ್ಗದರ್ಶನ, ಸಮಾಲೋಚನೆ ಸೌಲಭ್ಯಗಳು
- ಕಾಲೇಜು ಅಡುಗೆ ಮನೆಯಲ್ಲಿ ತಯಾರಿಸಿದ ತಾಜಾ ಮತ್ತು ಆರೋಗ್ಯಕರ ಆಹಾರ.
- ಕ್ಯಾಂಪಸ್‌ನಲ್ಲಿ 24 ಗಂಟೆ ಸಿಸಿ ಟಿವಿ ಕಣ್ಗಾವಲು ಮತ್ತು ಭದ್ರತೆ
- ಹುಡುಗಿಯರು ಮತ್ತು ಹುಡುಗರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯ
- ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಆವರ್ತಕ ಮತ್ತು ಆಳವಾದ ಮೌಲ್ಯಮಾಪನ.
- ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ.
- ಡಿಜಿಟಲ್ ಮೂಲಸೌಕರ್ಯದೊಂದಿಗೆ ಎಸಿ ತರಗತಿ ಕೊಠಡಿಗಳು.
- ಇ-ಲೈಬ್ರರಿ ಸೌಲಭ್ಯದ ಗ್ರಂಥಾಲಯ.
- ಪ್ರತಿ ಮಹಡಿಗೆ ಪ್ರತ್ಯೇಕ ವಾರ್ಡನ್.
- ಸಹ-ಪಠ್ಯ ಮತ್ತು ಮನರಂಜನಾ ಆವಶ್ಯಕತೆಗಳು ಲಭ್ಯ

ಶ್ರೀಅರಬಿಂದೋ ಸ್ವತಂತ್ರ ಪದವಿ ಪೂರ್ವ ಕಾಲೇಜು

ಪಿಯು ಶಿಕ್ಷಣದ ಮಿನುಗು ತಾರೆ...

ಒಬ್ಬ ವಿದ್ಯಾರ್ಥಿ ಜೀವನದಲ್ಲಿ ಪದವಿ ಪೂರ್ವ ಶಿಕ್ಷಣ ಬಹಳ ಮಹತ್ವದ ಘಟ್ಟವಾಗಿದೆ. ಇದರಲ್ಲಿ ತೆಗೆದುಕೊಳ್ಳುವ ಸೂಕ್ತ ನಿರ್ಧಾರ ಆ ವ್ಯಕ್ತಿಯ ಜೀವನ ಸರಿಯಾದ ದಿಕ್ಕಿನಲ್ಲಿ ರೂಪಿಸಬಲ್ಲದು. ಇಂತಹ ಶಿಕ್ಷಣದಲ್ಲಿ ಅತ್ಯುತ್ತಮ ಬೆಂಬಲ ವ್ಯವಸ್ಥೆ ನೀಡಬೇಕೆಂದು ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗದಲ್ಲಿ ಕೊಡುಗೈ ದಾನಿ, ಹಿರಿಯ ಮುತ್ಸದ್ದಿ ಉದ್ಯಮಿ ಶ್ರೀ ಹಿರೇಜಾಳ್ ಇಬ್ರಾಹಿಂ ಅವರ ಮೂಲ ಆಶಯ ಹಾಗೂ ಸಮಾನ ಮನಸ್ಕರ ಒತ್ತಾಸೆ ಮೇರೆಗೆ 12ನೇ ಆಗಸ್ಟ್ 1999ರಂದು "ಶ್ರೀ ಅರಬಿಂದೋ ಫೌಂಡೇಷನ್ ಫಾರ್ ಎಜುಕೇಷನ್" ಎಂಬ ಚಾರಿಟಬಲ್ ಟ್ರಸ್ಟ್ ಅಡಿ ಜ್ಞಾನದೀಪ ವಿದ್ಯಾ ಸಂಸ್ಥೆ ಉದಯವಾಯಿತು. ಪೋಷಕರ ಒತ್ತಾಯದ ಮೇರೆಗೆ ಈ ಸಂಸ್ಥೆಯಡಿ ಗುಣಾತ್ಮಕ ಪದವಿ ಪೂರ್ವ ಶಿಕ್ಷಣ ನೀಡಲು ಶ್ರೀಅರಬಿಂದೋ ಸ್ವತಂತ್ರ ಪದವಿ ಪೂರ್ವ ಕಾಲೇಜು ಆರಂಭಿಸಲಾಯಿತು. ಕಾಲೇಜು ಆರಂಭದಿಂದಲೆ ಸದ್ದಿಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ಹಾಗೂ ಆಗಸದ ಕಡೆ ಬೆಳವಣಿಗೆ ಪರ್ವ ಶುರುವಾಯಿತು. ಹೀಗೆ ಟ್ರಸ್ಟಿ, ಸಿಬ್ಬಂದಿ, ವಿದ್ಯಾರ್ಥಿ ಹಾಗೂ ಪೋಷಕರ ಸಹಕಾರ ಬೆಂಬಲದೊಂದಿಗೆ ಮುನ್ನಡೆಯುತ್ತಿದೆ.

ಇಲ್ಲಿನ ಸಾವಿರಾರು ವಿದ್ಯಾರ್ಥಿಗಳು ಇಂದು ರಾಜ್ಯ ಹಾಗೂ ರಾಷ್ಟ್ರದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉನ್ನತ ವ್ಯಾಸಂಗ ಪಡೆದು ಸಮಾಜದ ಪ್ರಬುದ್ಧ ಪ್ರಜೆಗಳಾಗಿ ಉನ್ನತ ಹುದ್ದೆಯಲ್ಲಿ ಉತ್ತಮ ಸೇವೆಯಲ್ಲಿ ತೊಡಗಿಕೊಂಡಿದ್ದು ಈ ವಿದ್ಯಾ ಸಂಸ್ಥೆಯ ಮುಕುಟ ಕಿರೀಟದ ಹಿರಿಮೆಯ ಗರಿಗಳಾಗಿದ್ದಾರೆ. ಇದರಿಂದ ಸಂಸ್ಥೆಯ ಗೌರವ ಹಾಗೂ ಜವಾಬ್ದಾರಿ ಹೆಚ್ಚಿದೆ. ಆರಂಭದಿಂದಲೂ ಬಹು ಉತ್ಸಾಹಿ, ಅರ್ಪಣಾ ಮನೋಭಾವ ಹೊಂದಿರುವ ಅನುಭವಸ್ಥ ಹಾಗೂ ಕಾರ್ಯತತ್ಪರತೆಯುಳ್ಳ ಅಧ್ಯಾಪಕ ವೃಂದ ಒಂದು ಮಾದರಿ ಕಾಲೇಜು ಆಗಿ ರೂಪಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಆರಂಭದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಗೆ ಒತ್ತು ನೀಡುತ್ತಿರುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗಿದೆ. ಸೇವಾ ಮನೋಭಾವದ ಆಡಳಿತ ಮಂಡಳಿ ಪಿಯು ಶಿಕ್ಷಣಕ್ಕೆ ಯಾವುದೇ ವಂತಿಗೆ ಸಂಗ್ರಹಿಸದೆ ಪ್ರತಿಭಾನ್ವಿತ ಮಕ್ಕಳಿಗೆ ತುಂಬಾ ಕಡಿಮೆ ಶುಲ್ಕದೊಂದಿಗೆ ಗುಣಾತ್ಮಕ ಶಿಕ್ಷಣ ನೀಡುತ್ತಿರುವುದು ಈ ಕಾಲೇಜಿನ ಹೆಗ್ಗಳಿಕೆ. ಮಲೆನಾಡು ಹಾಗೂ ನಾಡಿನ ಇತರೆ ಭಾಗದ ಪೋಷಕರು ತಮ್ಮ ಹೆಣ್ಣು ಮಕ್ಕಳಿಗೆ ಉತ್ಕೃಷ್ಟ ಪಿಯು ಶಿಕ್ಷಣ ಕೊಡಿಸಲು ಕಾಲೇಜು ಆವರಣದಲ್ಲೇ ಉತ್ತಮ ಗುಣಮಟ್ಟದ ಸುಸಜ್ಜಿತ ಹಾಗೂ ಸುರಕ್ಷಿತ ಪ್ರತ್ಯೇಕ ವಿದ್ಯಾರ್ಥಿನಿ ನಿಲಯದ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ಸಂತೃಪ್ತ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ನಿರಾತಂಕವಾಗಿ ಈ ಕಾಲೇಜಿಗೆ ದಾಖಲಿಸಿ ನೆಮ್ಮದಿಯಿಂದ ಇರುವುದು ಇದಕ್ಕೆ ಸಾಕ್ಷಿಯಾಗಿದೆ. ಕೆಲ ಪೋಷಕರ ಒತ್ತಾಸೆಯಂತೆ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಿದ್ಯಾರ್ಥಿ ನಿಲಯದ ವ್ಯವಸ್ಥೆಗೆ ಕಟ್ಟಡ ಕಾಮಗಾರಿ ನಡೆಯುತ್ತಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದ ಆರಂಭ ಆಗಲಿದೆ.

ಕಾಲೇಜಿನಲ್ಲಿ ಸೈದ್ಧಾಂತಿಕ ವಿಷಯಗಳ ಜತೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಯೋಜಿತ ರೀತಿ ಅಳವಡಿಸಿಕೊಂಡಿದ್ದು, ಒಳ್ಳೆಯ ಫಲ ನೀಡಿದೆ. ಮಕ್ಕಳಿಗೆ ಪ್ರತಿ ವಿಷಯದಲ್ಲಿ ಆಳವಾದ ಪರಿಕಲ್ಪನೆ ನೀಡಲು ಅವರಿಗೆ ಹೊರೆಯಾಗದಂತೆ ವಿದ್ಯಾರ್ಥಿ ಸ್ನೇಹಿ ಯೋಜನೆ ರೂಪಿಸಿಕೊಂಡು ನಿಗದಿತವಾಗಿ ಕಿರು ಪರೀಕ್ಷೆಗಳು ನಡೆಸಿ ಅದರ ಫಲಿತಾಂಶವನ್ನು ಮಕ್ಕಳು ಹಾಗೂ ಪೋಷಕರಿಗೆ ತಿಳಿಸಲಾಗುತ್ತಿದೆ. ಆಧುನಿಕ ತಂತ್ರಜ್ಞಾನದ ಹಾಗೂ ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ತರಗತಿಗಳು ನಡೆಯುತ್ತಿದ ಮಕ್ಕಳ ಮನಗೆದ್ದಿದೆ. ವಿಜ್ಞಾನ ವಿಷಯಗಳನ್ನು ಪ್ರಾಯೋಗಿಕವಾಗಿ ಬೋಧಿಸುವುದು ಪರಿಣಾಮಕಾರಿಯಾಗಿದೆ. ಮನೋವೈಜ್ಞಾನಿಕ ತತ್ವದ ಮೇಲೆ ಇಲ್ಲಿ ಪ್ರಯೋಗಗಳನ್ನು ನಡೆಸಿ ಕಲಿಯಲು ಅನುಕೂಲವಾಗುವಂತೆ ಬಹು ವ್ಯವಸ್ಥಿತ ಪ್ರಯೋಗಾಲಯಗಳನ್ನು ಒಳಗೊಂಡ ತರಬೇತಿ ವ್ಯವಸ್ ಇದೆ. ಮುಂದಿನ ಉನ್ನತ ಶಿಕ್ಷಣದಲ್ಲಿ ಸ್ವತಂತ್ರವಾಗಿ ಪ್ರಯೋಗಗಳನ್ನು ಮಾಡುವ ಆತ್ಮವಿಶ್ವಾಸ ಇಲ್ಲಿನ ಮಕ್ಕಳ ದೊರೆತಿದೆ. ಎಲ್ಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಸ್ವಚ್ಛ ನಿರ್ಮಲವಾದ ಪರಿಸರದಲ್ಲಿ ಬಿಸಿ ಹಾಗೂ ರುಚಿಯಾದ ಊಟ ಹಾಗೂ ಸಂಜೆ ಮಕ್ಕಳ ಇಷ್ಟದ ತಿಂಡಿ ಅವರ ಹಸ ನೀಗಿಸಿ ಕಲಿಕೆಯ ಕಡೆ ತಮ್ಮ ಗಮನ ನೀಡಲು ಸಹಕಾರಿಯಾಗಿದೆ. ಉತ್ತಮ ಗುಣಮಟ್ಟದ ಸಾರಿಗೆ ವ್ಯವ ಇದ್ದು ಚನ್ನಗಿರಿ, ಭದ್ರಾವತಿ ಹಾಗೂ ಶಿವಮೊಗ್ಗ ಕಡೆಯಿಂದ ಬರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಓಡಾಟದ ಚಿಂತೆ ಕಡಿಮೆ ಮಾಡಿದೆ. ಇಲ್ಲಿ ಶಿಕ್ಷಣ ಪಡೆದ ಮಕ್ಕಳು ತಮ್ಮ ಸೋದರ, ಸೋದರಿಯರನ್ನು ಇಲ್ಲಿಯೇ ದಾಖಲಿಸಿ ತಮ್ಮಂತೆ ಶೈಕ್ಷಣಿಕ ಪ್ರಗತಿಗೆ ಕಾರಣರಾಗಿದ್ದಾ ಶಿವಮೊಗ್ಗ ಜಿಲ್ಲೆಯಲ್ಲಿ ಹತ್ತು ಹಲವು ಹೊಸ ಪ್ರಯೋಗಗಳಿಂದ ಹಲವು ಮೊದಲುಗಳಿಂದ ನಾಡಿನ ಮನೆ ಮಾತಾದ ಈ ಸಂಸ್ಥೆ ಪೋಷಕರಿಗೆ ಆರ್ಥಿಕವಾಗಿ ಹೊರೆ ಮಾಡದೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ನೆರವಾಗಿ ಅವರ ಮೆಚ್ಚಿನ ಆಯ್ಕೆಯಾಗಿದೆ.

ಕಳೆದೆರಡು ವರ್ಷದಿಂದ ವಾಣಿಜ್ಯ (ಕಾಮರ್ಸ್) ವಿಷಯ ಆರಂಭಿಸಿದ್ದು ಉತ್ತಮ ಫಲಿತಾಂಶ ದೊರೆತಿದೆ. ಜ್ಞಾನದೀಪ ವಿದ್ಯಾ ಸಂಸ್ಥೆಯ ಘೋಷವಾಕ್ಯ 'ಸವಿದ್ಯಾ ವಿಮುಕ್ತಯೇ'. ಇದರ ಧ್ಯೇಯದಂತೆ ಒಳ್ಳೆಯ ವಿದ್ಯೆ ಮಕ್ಕಳ ನೋವು ದುಃಖ, ಅಜ್ಞಾನದ ಅಂಧಕಾರದಿಂದ ಮುಕ್ತಿ ನೀಡುತ್ತಾ ಅವರ ಸರ್ವತೋಮುಖ ಪ್ರಗತಿಗೆ ಸಹಕಾರ ನೀಡುತ್ತಾ ಮುನ್ನಡೆಯುತ್ತಿರುವ 'ಶ್ರೀಅರಬಿಂದೋ ಸ್ವತಂತ್ರ ಪದವಿಪೂರ್ವ ಕಾಲೇಜು' ಶಿಕ್ಷಣ ಕ್ಷೇತ್ರದ ಆಗಸದಲ್ಲಿ ಮಿನುಗುತಾರೆಯೆನಿಸಿರುವುದು ಅತಿಶಯೋಕ್ತಿಯಲ್ಲ.

> ಸೇವಾ ಮನೋಭಾವದಿಂದ ಆರಂಭವಾದ 'ಶ್ರೀಅರಬಿಂದೋ ಫೌಂಡೇಷನ್ ಫಾರ್ ಎಜುಕೇಷನ್' ಶಿಕ್ಷಣ ಸಂಸ್ಥೆಯು ಶೈಕ್ಷಣಿಕವಾಗಿ ಉತ್ತಮ ಸಾಧನೆಯಿಂದಾಗಿ ರಾಜ್ಯದಲ್ಲೇ ಪ್ರತಿಷ್ಠಿತ ವಿದ್ಯಾ ಸಂಸ್ಥೆ ಎನಿಸಿಕೊಂಡಿದೆ. ಶ್ರೀಅರಬಿಂದೋ ಸ್ವತಂತ್ರ ಪದವಿ ಪೂರ್ವ ಕಾಲೇಜು, ಪದವಿ ಪೂರ್ವ ಶಿಕ್ಷಣದಲ್ಲಿ **ಗುಣಮಟ್ಟದ ಶಿಕ್ಷಣ ಹಾಗೂ ವಿದ್ಯಾರ್ಥಿಗಳ** ಸರ್ವತೋಮುಖ ಬೆಳವಣಿಗೆಗೆ ಪೂರಕ ವಾತಾವರಣ, ಸಂಪೂರ್ಣ ವ್ಯವಸ್ಥೆ ಇದೆ. ಮಕ್ಕಳ ಕಲಿಕೆ ಹಾಗೂ ಉತ್ತಮ ಭವಿಷ್ಯಕ್ಕೆ ಭರವಸೆಯಾಗಿದೆ.
>
> -**ಡಾ.ಕೆ.ನಾಗರಾಜ್**, ಪ್ರಾಂಶುಪಾಲರು, ಶ್ರೀಅರಬಿಂದೋ ಸ್ವತಂತ್ರ ಪದವಿ ಪೂರ್ವ ಕಾಲೇಜು

ಜಾವಳ್ಳಿಯ ಶ್ರೀಅರಬಿಂದೋ ಸ್ವತಂತ್ರ ಪಿಯು ಕಾಲೇಜು ಸುಸಜ್ಜಿತ ಕಟ್ಟಡ.